# ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.

## ಎಸ್.ಸಿ. ನಂಃ 11/2025

| | | | |
|---|---|---|---|
| **ಸಾಕ್ಷಿದಾರರ ಹೆಸರುಃ** | ಶಿವ ರೆಡ್ಡಿ | ಪ್ರಾಸಾಃ | 08 |
| **ತಂದೆಯ ಹೆಸರುಃ** | ಯಾಮಣ್ಣ | ಚಾಸಾಃ | 09 |
| **ವಯಸ್ಸುಃ** | 60 | ಪ್ರಮಾಣ ವಚನ ಭೋದಿಸಿದ ದಿನಾಂಕ | 19.09.2025 |
| **ಉದ್ಯೋಗಃ** | ರೈತ | | |
| **ವಾಸ ಸ್ಥಳಃ** | ಕೋತಪಲ್ಲಿ | | |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಆರೋಪಿ ಗೊತ್ತು. ನಿಮ್ಮಕಾಯಲ ಹಳ್ಳಿಯಲ್ಲಿ ಚಾಸಾ-*8* ರವರಿಗೆ ಜ್ಯೂಸ್ ಅಂಗಡಿ ಇದ್ದು, ಅಲ್ಲಿ ಆರೋಪಿ ಕೆಲಸ ಮಾಡುತ್ತಿದ್ದ. ಚಾಸಾ-*1* ಮತ್ತು ಚಾಸಾ-*2* ಗೊತ್ತಿಲ್ಲ. ನಿಪಿ-*8* ಮತ್ತು ನಿಪಿ-*9* ಮಹಜರ್ ನಲ್ಲಿರುವ ಸಹಿ ನನ್ನದು. ನಿಪಿ-*8* ಬಿ ಮತ್ತು ನಿಪಿ-*9* ಬಿ ಎಂದು ಗುರುತಿಸಲಾಯಿತು. ಈಗೆ *1* ವರ್ಷದ ಹಿಂದೆ ಒಂದು ಗಲಾಟೆ ಸಂಬಂಧ ಪೋಲಿಸರು ನಿಮ್ಮಕಾಯಲ ಹಳ್ಳಿಗೆ ಬಂದಿದ್ದರು. ಅಲ್ಲಿ ಬರವಣಿಗೆ ಮಾಡಿಕೊಂಡು ನನ್ನ ಸಹಿ ಪಡೆದರು. ಆ ಸಮಯದಲ್ಲಿ ಮು.ಮಾ.*01* ಮಚ್ಚನ್ನು ಅಮಾನತು ಪಡಿಸಿಕೊಂಡರು. ಚಾಸಾ-*10* ಕೂಡ ಹಾಜರಿದ್ದು ಸಹಿ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.ಎನ್.ಎಂ.ಎನ್.ವಕೀಲರಿಂದ ಪಾಟೀ ಸವಾಲು**

ಪೋಲಿಸರು ಏನು ಬರೆದುಕೊಂಡಿದ್ದಾರೆಂದು ನನಗೆ ಗೊತ್ತಿಲ್ಲ. ಮು.ಮಾ.01 ನ್ನು ನನ್ನ ಸಮಕ್ಷಮ ಅಮಾನತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ.01 ರ ಮೇಲೆ ಯಾವುದೇ ಖಚಿತ ಗುರುತನ್ನು ನೆನಪಿಟ್ಟುಕೊಂಡಿಲ್ಲ. ನಾನು ಘಟನಾಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ಪೋಲಿಸರ

ಹೇಳಿಕೆ ಮೇರೆಗೆ ಸಹಿ ಮಾಡಿದ್ದೇನೆ. ಚಾಸಾ-1 ರವರಿಗೆ ಸಹಾಯ ಮಾಡಲು ಯಾವುದೇ ಸಹಿ ಮಾಡದಿದ್ದರೂ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ...... ಇಲ್ಲ ......</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು) ಓ.ಹೇ.ಕೇ. ಸರಿ ಇದೆ.

ಸಹಿ/-

ದಿಃ 19.09.2025

**ಕೆ.ಎಂ.ರಾಜಶೇಖರ**

ಸ್ಥಳಃ ಚಿಂತಾಮಣಿ

ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ, ಕಾರ್ಯಸ್ಥಾನ ಚಿಂತಾಮಣಿ.